ಸಾಕ್ಷಿಯನ್ನು ದಿನಾಂಕ: 29-05-2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ವಿ.ಆರ್.ಎನ್. ವಕೀಲರಿಂದಃ**

ನಾನು ದಾಖಲಿಸಿದ ದಾವೆಯಲ್ಲಿ ಸ್ಥಳದಲ್ಲಿ ಓಣಜಿ ಇದೆ ಎಂದು ಬರೆಸಿರುತ್ತೇವೆ. ಓಣಜಿ ಎಂದರೆ ಎರಡೂ ಕಡೆ ಮಣ್ಣಿನ ದಿಬ್ಬ ಇದ್ದು ಮಧ್ಯ ನೀರು ಹೋಗುತ್ತದೆ. ನನ್ನ ಪ್ರಕಾರ ಓಣಜಿ ಎಂದರೆ ಜನರು ತಿರುಗಾಡುವ ಚಿಕ್ಕದಾದ ರಸ್ತೆ. ಸದ್ರಿ ಓಣಜಿ 2 ಅಡಿ ಅಗಲ ಇರಬಹುದು. ಸದ್ರಿ ದಾವೆಯಲ್ಲಿ ಓಣಜಿ ಎಷ್ಟು ಅಗಲದ್ದು ಎಂದು ಬರೆಸಿಲ್ಲ. ಸದ್ರಿ ಓಣಜಿಯಲ್ಲಿ ದನ ಕರುಗಳು ಓಡಾಡುತ್ತದೆ ಎಂದು ಬರೆಸಿದ್ದೇನೆ. ನಮ್ಮ ಪ್ರಕಾರ ಎರಡು ಅಡಿ ಅಗಲದ ದಾರಿಯಲ್ಲಿ ದನಗಳು ಓಡಾಡುತ್ತದೆ. ನಮ್ಮ ಮನೆಯ ಕೆಳಗೆ ಅದೇ ಓಣಜಿಗೆ ತಾಗಿ ನೂರಾರು ಎಕರೆ ಗದ್ದೆ ಇದೆ ಎಂದರೆ ಸರಿ. ಅಲ್ಲಿ ಪ್ರತಿ ವರ್ಷ ಗದ್ದೆ ಮಾಡುತ್ತಾರೆ ಎಂದರೆ ಸರಿ. ಗದ್ದೆ ಮಾಡಲು ಟಿಲ್ಲರ ಮತ್ತು ಯಂತ್ರಗಳು ಬೇಕಾಗುತ್ತದೆ ಎಂದರೆ ಸರಿ. ಟಿಲ್ಲರ್ ಸಾಗಿಸಲು ಬೇರೆ ದಾರಿ ಇದೆ.

ಸದ್ರಿ ದಾರಿಯ ಬಗ್ಗೆ ನಮ್ಮ ಮತ್ತು ಆರೋಪಿತರ ನಡುವೆ ಸುಮಾರು 4 ಪ್ರಕರಣಗಳು ದಾಖಲಾಗಿದೆ. ಈಗ ಸದ್ರಿ ಓಣಜಿಯನ್ನು ಒಡೆದು ಹಾಕಿರುತ್ತಾರೆ. ಸದ್ರಿ ಓಣಜಿಯಲ್ಲಿ ಯಾವುದೇ ವಾಹನಗಳು ಸಾಗಾಟ ಮಾಡುವುದಿಲ್ಲ. ವಾಹನಗಳನ್ನು ಬಲವಂತವಾಗಿ ತೆಗೆದುಕೊಂಡು ಹೋಗಲು ಸದ್ರಿ ಓಣಜಿಯನ್ನು ತೆಗೆದಿದ್ದೇವೆ. ಯಾವುದೇ ಕಾಲಕ್ಕೂ ಸದ್ರಿ ಓಣಜಿಯಲ್ಲಿ ವಾಹನ ಸಾಗಾಟ ಮಾಡಿರುವುದಿಲ್ಲ. ಸದ್ರಿ ದಾವೆಯಲ್ಲಿ ದಾರಿಯನ್ನು ಒಡೆದು ಅಗಲ ಮಾಡಿ ಲಾರಿಗಳನ್ನು ಓಡಿಸುತ್ತಿದ್ದಾರೆ ಎಂದು ನಾನು ಅರ್ಜಿ ಹಾಕಿರುವುದಿಲ್ಲ. ಸದ್ರಿ ದರೆ ಈಗ 10 ಅಡಿ ಅಗಲ ಆಗಿದೆ. ಸದ್ರಿ ಓಣಜಿಯಲ್ಲಿ ಸಾರ್ವಜನಿಕರು ಅನಾದಿ ಕಾಲದಿಂದ ತಿರುಗಾಡುತ್ತಿದ್ದ ದಾರಿ ಆಗಿತ್ತು ಎಂದರೆ ಸರಿ. ನಾನು ದೂರಿನಲ್ಲಿ ಆರೋಪಿತರು ಸದ್ರಿ ಓಣಜಿಗೆ ಅಕ್ರಮ ಪ್ರವೇಶ ಮಾಡಿದ್ದಾರೆ ಎಂದು ಬರೆಸಿರುತ್ತೇನೆ. ದೂರಿನಲ್ಲಿ ದಾವಾ ಸ್ಥಳ ಎಂದು ಬರೆಸಿದ್ದು ಅದು ಸ.ನಂಃ 748 ಆಗಿರುತ್ತದೆ. ಅದೇ ಸರ್ವೆ ನಂಬರದಲ್ಲಿ ಸದ್ರಿ ಓಣಜಿ ಹಾದು ಹೋಗಿದೆ. ಓಣಜಿಯಲ್ಲಿ ಯಾರಾದರೂ ತಿರುಗಾಡಿದರೆ ಅದು ಅಕ್ರಮ ಪ್ರವೇಶ ಆಗುವುದಿಲ್ಲ. ದೂರಿನಲ್ಲಿ ನಾನು ಅದಕ್ಕೆ ಅಕ್ರಮ ಪ್ರವೇಶ ಎಂದು ಬರೆಸಿರುತ್ತೇನೆ. ಸಾಕ್ಷಿ ಮುಂದುವರಿದು ಅವರು ನಮ್ಮ ಮಾಲ್ಕಿ ಸ್ಥಳಕ್ಕೂ ಕೂಡ ಬಂದಿದ್ದರು ಎಂದು ನುಡಿಯುತ್ತಾರೆ. ನಮ್ಮ ಪ್ರಕಾರ ಗಲಾಟೆ ಓಣಜಿಯಲ್ಲೆ ಆಗಿರುತ್ತದೆ.

ಸದ್ರಿ ದಿನ ಒಟ್ಟೂ 6 ಜನ ಬಂದಿದ್ದರು. ನಮ್ಮ ಮನೆಯಲ್ಲಿ ನನ್ನ ತಂದೆ, ತಾಯಿ, ನಮ್ಮ ಅತ್ತಿಗೆ ಇದ್ದರು. ಓಣಜಿಯ ಹತ್ತಿರ ನಾನು ಮತ್ತು ನನ್ನ ಅಣ್ಣ ಕೆಲಸ ಮಾಡುತ್ತಿದ್ದೆವು. ಆಗ ನಾವು ನಮ್ಮ ಕೊಟ್ಟಿಗೆ ರಿಪೇರಿ ಮಾಡುತ್ತಿದ್ದೆವು. ದಿನಾಂಕಃ 07.06.2020 ರಂದು ಆರೋಪಿತರು ನಮ್ಮ ಕೊಟ್ಟಿಗೆಯ ಕೆಳಭಾಗವನ್ನು ಅಗೆದಿದ್ದರು. ಆಗ ನಾವು ದೂರನ್ನು ನೀಡಿದ್ದೇವೆ. ನಂತರ ಪೋಲಿಸರು ಆರೋಪಿತರನ್ನು ಕರೆಸಿ ಎಚ್ಚರಿಕೆ ಕೊಟ್ಟಿದ್ದರು. ಪಂಚನಾಮೆಯನ್ನು ಮಾಡಿರುವುದಿಲ್ಲ. ಆ ರೀತಿ ಮಾಡಿದ್ದರಿಂದ 25-30 ಸಾವಿರ ರೂಪಾಯಿ ನಷ್ಟ ಆಗಿರುತ್ತದೆ. ನಷ್ಟ ಆದ ಬಗ್ಗೆ ನಾವು ಯಾವುದೇ ದಾವೆಯನ್ನು ಹೂಡಿರುವುದಿಲ್ಲ.

ಮೊದಲು ನಾಗರಾಜ ವಿಷ್ಣು ಮೇಸ್ತ, ನಂತರ 1, 4, 3, 2, 5 ನೇ ಆರೋಪಿತರು ಬಂದಿರುತ್ತಾರೆ. ನಾನು ಈ ಪ್ರಕರಣದಲ್ಲಿ ನಾಗರಾಜ ವಿಷ್ಣು ಮೇಸ್ತನ ಕುರಿತು ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ. ನಾನು

ನಾಗರಾಜ ವಿಷ್ಣು ಮೇಸ್ತ ಸ್ಥಳದಲ್ಲಿ ಇರುವುದಿಲ್ಲ ಕಣ್ತಪ್ಪಿನಿಂದ ಅವನ ಹೆಸರನ್ನು ಸೇರಿಸಿದ್ದೇನೆ ಎಂದು ಮರು ಹೇಳಿಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಒಬ್ಬರ ಹಿಂದೆ ಒಬ್ಬರು ಬಂದಿರುತ್ತಾರೆ. ನಾಗರಾಜ ಮೇಸ್ತ ಮೊದಲು ಬಂದವನು ನನ್ನ ಕೆನ್ನೆಗೆ ಹೊಡೆದಿರುತ್ತಾನೆ. ಆಗ ಉಳಿದವರು ಸಿಮೆಂಟನ್ನು ಕೀಳುತ್ತಿದ್ದರು. ಆಗ ನಾನು ಜೋರಾಗಿ ಬೊಬ್ಬೆ ಹೊಡೆದಿದ್ದು ನನ್ನ ತಂದೆ, ತಾಯಿ ಅತ್ತಿಗೆ ಬಂದಿರುತ್ತಾರೆ. ನನಗೆ ನಾಗರಾಜ ವಿಷ್ಣು ಮೇಸ್ತ ಮಾತ್ರ ಹೊಡೆದಿರುತ್ತಾನೆ. ನಾನು ಓಡಿ ಹೋಗಿದ್ದು ಇರುವುದಿಲ್ಲ. ಆಗ ನನ್ನ ಅಣ್ಣನನ್ನು 1 ನೇ ಆರೋಪಿ ದೂಡಿ ಹಾಕಿರುತ್ತಾನೆ. ನನ್ನ ಅಣ್ಣನಿಗೆ ತರಚಿದ ಗಾಯವಾಗಿದ್ದು ಆಗ ನನ್ನ ಅಣ್ಣ ಬಿಳಿಯ ಬಣ್ಣದ ಶರ್ಟನ್ನು ಧರಿಸಿದ್ದು ಅದಕ್ಕೆ ಮಣ್ಣು ತಾಗಿತ್ತು. ನಾಗರಾಜ ಮೇಸ್ತ ಮತ್ತು 1 ನೇ ಆರೋಪಿ ನನ್ನ ಅಣ್ಣನಿಗೆ ಹೊಡೆದಿರುತ್ತಾರೆ. ಉಳಿದವರು ಗಲಾಟೆ ಮಾಡಿದ್ದು ಇರುವುದಿಲ್ಲ. ಸಿಮೆಂಟನ್ನು ಕಿತ್ತಿರುತ್ತಾರೆ. ವಿಡಿಯೋ ಚಿತ್ರೀಕರಣವನ್ನು ನಾವು ಮಾಡಿರುವುದಿಲ್ಲ. ಆರೋಪಿತರೇ ಮಾಡಿಸಿರುತ್ತಾರೆ. ಸದ್ರಿ ದಿನ ನಾನು ಹೇಳಿದಂತೆ ಯಾವುದೇ ರೀತಿಯ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾದಲ್ಲಿ ದೊಡ್ಡ ರಸ್ತೆಯನ್ನು ಚಿಕ್ಕ ರಸ್ತೆ ಎಂದು ತೋರಿಸಿ ಸಾಕ್ಷಿ ಸೃಷ್ಟಿ ಮಾಡುವ ಸಲುವಾಗಿ ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ವಿಡಿಯೋ ರೆಕಾರ್ಡ ಮಾಡಿದ್ದನ್ನು ಹಾಜರುಪಡಿಸುತ್ತೇನೆ ಎಂದು ಅರ್ಜಿ ಸಲ್ಲಿಸಿದ್ದು ಇರುವುದಿಲ್ಲ. ಘಟನೆ ನಡೆದ 4-5 ದಿನದ ನಂತರ ಪಂಚನಾಮೆಗೆ ಪೋಲಿಸರು ಬಂದಿರುತ್ತಾರೆ. ಆಗ ಒಡೆದು ಹೋದ ಸಿಮೆಂಟ್ ಕಟ್ಟೆಯನ್ನು ಪೋಲಿಸರಿಗೆ ತೋರಿಸಿರುತ್ತೇನೆ. ಪಂಚನಾಮೆಯಲ್ಲಿ 35 ಸಾವಿರ ರೂಪಾಯಿ ನಷ್ಟ ಆಗಿದೆ ಎಂದು ಬರೆಸಿರುತ್ತೇನೆ. ಪೋಲಿಸರು ನಾವು ಧರಿಸಿದ್ದ ಬಟ್ಟೆಯನ್ನು ಕೇಳಿರುವುದಿಲ್ಲ ಹಾಗೂ ನಾವು ಕೊಟ್ಟಿರುವುದಿಲ್ಲ. ಘಟನೆ ನಡೆದ ದಿನ ನಾವು ದೂರು ಕೊಡಲು ಹೋಗಿರುವುದಿಲ್ಲ. ಘಟನೆ ನಡೆದ 6 ದಿನದ ನಂತರ ದೂರು ಕೊಟ್ಟಿರುತ್ತೇವೆ. ಪೋಲಿಸ ಠಾಣೆಗೆ ಹೋಗಿ ನಮಗೆ ರೂಢಿ ಇದೆ. ಘಟನೆ ಆದ ದೂರು ದಾಖಲಿಸುವ ಮಧ್ಯದಲ್ಲಿ ನ್ಯಾಯಾಲಯಕ್ಕೆ ಬಂದಿದ್ದೆ, ಆದರೆ ದೂರನ್ನು ನೀಡಿರುವುದಿಲ್ಲ. ಘಟನೆ ಬಗ್ಗೆ ನನ್ನ ಸಿವಿಲ್ ವಕೀಲರಿಗೆ ತಿಳಿಸಿರುತ್ತೇನೆ. ನಮಗೆ ಭಯ ಇದ್ದ ಕಾರಣ ದೂರನ್ನು ನೀಡಿರುವುದಿಲ್ಲ. ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ ಇದೆ/-

ಪ್ರ ದ ನ್ಯಾದಂ ಹೊನ್ನಾವರ.